ಎದೆಗೆ ಎದೆ ತಾಗಿಸಿಕೊಂಡು ಮಲಗಿದ್ದಾಗ, ಅವಳ ಬೆವೆತ ಬೆನ್ನ ಸೀಳಿನಲಿ ನನ್ನ ಬೆರಳುಗಳು ಜಾರಿದಾಗ ನುಲಿಯುತ್ತ ಮುಲುಕಿದಳು. ಎಲ್ಲೋ ಪಿಯಾನೋದ ಕೀಬೋರ್ಡಿನ ಮೇಲೆ ಓಡಿದ ಬೆರಳುಗಳಿಂದ ಬೀತೋವನಿನ ಸಿಂಫೋನಿಯೊಂದು ಕೇಳಿಸಿತು. ಇಬ್ಬರ ದೇಹದ ಬಿಸಿಗೆ ಕರಗಿ ಕಲೆತು ಬೆರೆತ ಬೆವರಿನ ಘಮಲು ಕೋಣೆಯೊಳಗೆ ತುಂಬಿ ಹರಡಿತು.

★★★

ತಾನು ನಾರ್ವೆಯಿಂದ **KL**ಗೆ ಕಂಪನಿಯ ಕೆಲಸವಾಗಿ ಬಂದಿರುವುದಾಗಿಯೂ, ಲಾಂಗ್ ವೀಕ್ ಎಂಡ್ ಎಂದು ಇಲ್ಲಿ ಮೂರು ದಿನ ಕಳೆಯಲಿರುವುದಾಗಿಯೂ ಹೇಳಿ, ಮುಂದುವರೆಸುತ್ತ, ತನಗೆ ಮದುವೆಯಾಗಿ 18 ವಯಸ್ಸಿನ ಮಗ, 14 ವಯಸ್ಸಿನ ಮಗಳು ಇರುವುದಾಗಿಯೂ ನೆಮ್ಮದಿಯ ಸಂಸಾರವೆಂದೂ, ಒಂದೆರಡು ಕ್ಷಣ ಮೌನವಾಗಿ, ನಿಟ್ಟುಸಿರೊಂದನ್ನು ಬಿಟ್ಟು, **still...** ಎಂದೊಂದು ರಾಗ ಎಳೆದು... **something is missing** ಎಂದಳು. ನೋಡುವುದಕ್ಕೆ ಸುಮಾರು 45ರ ಆಸುಪಾಸಿನವಳಂತೆ ಕಂಡಳು.

ಈ 52ನೇ ವಯಸ್ಸಿಗೆ ನನ್ನ ಮಾರ್ಕೆಟಿಂಗ್ ಉದ್ಯೋಗದ ನಿಮಿತ್ತ ಬಹಳ ದಿನಗಳ ಕಾಲ ಮನೆಯಿಂದ ಹೊರಗಿರುತ್ತಿದ್ದೆ. ಅನೇಕ ಊರು ದೇಶಗಳನ್ನು ಒಂಟಿಯಾಗಿಯೇ ಸುತ್ತಿದ್ದೇನೆ. ಏನಿದ್ದರೂ ಡ್ರಿಂಕ್, ಡಿನ್ನರ್, ಹರಟೆ ಅಷ್ಟೇ. ಹಾಸಿಗೆಯವರೆಗೆ ಹೋಗುವ ಬಯಕೆಯೋ, ಸಾಹಸವೋ ಇರಲಿಲ್ಲ. ಇವಳಿಗೇಕೆ ಮರುಳಾದೆ? **You are charming** ಎಂದಳಲ್ಲ, ಅದಕ್ಕಾ? ಪರಿಚಯವಾದ ಒಂದೇ ದಿನಕ್ಕೆ ಹೀಗೊಂದು ಸಲಿಗೆ, ಸರಸವೇ! ನಮ್ಮ ಬಗ್ಗೆ ಪರಸ್ಪರ ಏನೂ ತಿಳಿಯದಿದ್ದರೂ ನಾವು ಅಪರಿಚಿತರಂತಿರಲಿಲ್ಲ. ಎಲ್ಲೋ ಎಂದೋ ತುಂಡಾದ ದಾರದ ಎಳೆಯನ್ನು ಹಿಡಿದು ಮತ್ತೆ ಗಂಟುಹಾಕಿದಂತೆ ಕಂಡಿತು. ದೇಹ ಹೊಸದೆನಿಸಿದರೂ, ಆ ಸ್ಪರ್ಶ, ವಾಸನೆ, ಸಲಿಗೆ, ಕರಗುವಿಕೆ... ಪ್ರಶ್ನೆ ಕಾಡಲಿಲ್ಲ. ನನ್ನನ್ನು ಕಳೆದುಕೊಂಡಂತಹ ಏನೋ ನೆಮ್ಮದಿ...

'ನಾನೆಂದೂ ಹೀಗೆ ಕಳೆದುಹೋಗಿರಲಿಲ್ಲ, ಎಷ್ಟು ನಿರಾಳ' ಎಂದಳು.

ನನ್ನ ಮಾತನ್ನು ಕದಿಯುತ್ತಿದ್ದಾಳೆ, 'ಸುಂದರ ರಾಕ್ಷಸಿ'.

★★★

ನನ್ನ ಎದೆ ಮೇಲೆ ಹೂದುಟಿ ಒತ್ತಿದಾಗ ಎಚ್ಚರವಾಯಿತು.

'ಗುಡ್ ಮಾರ್ನಿಂಗ್.'

'ಗು... ಮಾರ್ನಿಂಗ್.'

ಎದೆ ಕೂದಲ ಮೇಲೆ ಬೆರಳುಗಳು ಓಡಾಡುತ್ತಿದ್ದವು. ಅವಳ ಕುತ್ತಿಗೆಗೆ ಮುತ್ತಿಟ್ಟೆ. ಮುಗುಳ್ನಕ್ಕಳು.

'ಕಾಫೀ ಹೇಳಲೇ' ಎಂದಳು.

'ಹೂ...' ಎಂದೆ.

ಎದ್ದು ಇಂಟರ್‌ಕಾಂ ಬಳಿ ಹೋದಳು.

ಇಬ್ಬರು ಫ್ರೆಶ್ ಆಗಿ ಬಂದಾಗ, ಕಾಫಿ ಬಂತು. ನಾನು ಕಣ್ಣು ಮುಚ್ಚಿಕೊಂಡು ಚಪ್ಪರಿಸುತ್ತ ಕಾಫಿ ಹೀರಿದೆ. 'ಕಣ್ಣು ಮುಚ್ಚಿಕೊಂಡು ಚಪ್ಪರಿಸುತ್ತ ಕುಡಿಯುವಂತೆ ನಿನ್ನ ಕಾಫಿಯಲ್ಲಿ ಏನಿದೆ ಕೊಡು ನಾನು ಕುಡಿದು ನೋಡುತ್ತೇನೆ' ಎಂದು ನನ್ನ ಕೈಯಿಂದ ಕಪ್ ತೆಗೆದುಕೊಂಡು ಕುಡಿದಳು. ಅವಳು ಕಣ್ಣು ಮುಚ್ಚಿ ಚಪ್ಪರಿಸಲಿಲ್ಲ. ಟೀಪಾಯಿನ ಮೇಲಿದ್ದ ಅವಳ ಕಪ್ ಎತ್ತಿಕೊಂಡು ನಾನು ಕಣ್ಣು ಮುಚ್ಚಿ ಚಪ್ಪರಿಸಿ ಕುಡಿದೆ. ಕಿಲಕಿಲ ನಕ್ಕಳು.